www.sarkariblog.com



## ಕರ್ನಾಟಕ ಸರ್ಕಾರ

ಸಂಖ್ಯೆ: HORTI 102HEG 2019(P-1)

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿಗಳ ಕಟ್ಟಡ
ಬೆಂಗಳೂರು, ದಿನಾಂಕ: 16-05-2023.

## ಅಧಿಸೂಚನೆ

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ ಅಧಿನಿಯಮ, 1978 (1990ರ ಕರ್ನಾಟಕ ಅಧಿನಿಯಮ 14)ರ 8ನೇ ಪ್ರಕರಣದೊಂದಿಗೆ ಓದಲಾದಂತೆ 3ನೇ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರದನ್ವಯ ಕರ್ನಾಟಕ ಸರ್ಕಾರವು ಉದ್ದೇಶಿಸಿರುವಂತ ಅಧಿಸೂಚನೆ ಸಂಖ್ಯೆ; HORTI 102HEG 2019(P-1) ದಿನಾಂಕ: 24.03.2023 ರಲ್ಲಿ ಕರ್ನಾಟಕ ರಾಜ್ಯ ತೋಟಗಾರಿಕೆ ಸೇವೆಗಳ (ನೇಮಕಾತಿ) ನಿಯಮಗಳು, 2023ರ ಕರಡನ್ನು ಕರ್ನಾಟಕ ರಾಜ್ಯ ಪತ್ರ ಸಂಚಿಕೆಯ ಭಾಗ-IV ಎ ಕ್ರಮ ಸಂಖ್ಯೆ: 134 ರಲ್ಲಿ 24.03.2023ರಂದು ಪ್ರಕಟಿಸಿ ಸದರಿ ನಿಯಮಗಳಿಂದ ಬಾಧಿತರಾಗಬಹುದಾದ ಎಲ್ಲಾ ವ್ಯಕ್ತಿಗಳಿಂದ ಆಕ್ಷೇಪಣೆ ಮತ್ತು ಸಲಹೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ ಹದಿನೈದು ದಿನಗಳೊಳಗಾಗಿ ಸಲ್ಲಿಸಲು ಆಹ್ವಾನಿಸಲಾಗಿತ್ತು.

ಸದರಿ ರಾಜ್ಯ ಪತ್ರದ ಕರಡನ್ನು ಸಾರ್ವಜನಿಕರಿಗೆ ದಿನಾಂಕ: 24ನೇ ಮಾರ್ಚ್ 2023ರಂದು ಲಭ್ಯವಾಗುವಂತೆ ಮಾಡಲಾಗಿದ್ದರಿಂದ, ಮತ್ತು ಸದರಿ ಕರಡು ನಿಯಮಗಳ ಬಗ್ಗೆ ಸ್ವೀಕರಿಸಲಾದ ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಗಣಿಸಿರುವುದರಿಂದ,

ಈಗ ಕರ್ನಾಟಕ ರಾಜ್ಯ ಸಿವಿಲ್ ಸೇವಾ ಅಧಿನಿಯಮ 1978, (1990 ರ ಕರ್ನಾಟಕ ಅಧಿನಿಯಮ ಸಂಖ್ಯೆ: 14) ರ ಎನೇ ಪ್ರಕರಣದ (1)ನೇ ಉಪ ಪ್ರಕರಣವನ್ನು 8ನೇ ಪ್ರಕರಣದೊಡನೆ ಓದಿಕೊಂಡಂತೆ ಇದರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ಈ ಕೆಳಗಿನಂತೆ ನಿಯಮಗಳನ್ನು ರಚಿಸುತ್ತದೆ. ಎಂದರೆ:-

## ನಿಯಮಗಳು

1. **ಹೆಸರು ಮತ್ತು ಪ್ರಾರಂಭ: (1)** ಈ ನಿಯಮಗಳನ್ನು ಕರ್ನಾಟಕ ರಾಜ್ಯ ತೋಟಗಾರಿಕೆ ಸೇವೆಗಳ (ನೇಮಕಾತಿ) ನಿಯಮಗಳು, 2023 ಎಂದು ಕರೆಯತಕ್ಕದ್ದು.

   (2) ಈ ನಿಯಮಗಳು ಕರ್ನಾಟಕ ರಾಜ್ಯ ಪತ್ರದಲ್ಲಿ ಅಂತಿಮವಾಗಿ ಪ್ರಕಟಗೊಂಡ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. **ನೇಮಕಾತಿ ವಿಧಾನ ಮತ್ತು ಕನಿಷ್ಟ ವಿದ್ಯಾರ್ಹತೆ:** ಕರ್ನಾಟಕ ರಾಜ್ಯ ತೋಟಗಾರಿಕೆ ಸೇವೆಗಳ (ನೇಮಕಾತಿ) ನಿಯಮಗಳು, 2023 ರ ಈ ಕೆಳಗಿನ ಅನುಸೂಚಿಯಲ್ಲಿನ ಅಂಕಣ (2)ರಲ್ಲಿ ನಮೂದಿಸಿರುವ ವಿವಿಧ ವರ್ಗಗಳ ಹುದ್ದೆಗಳು, ವೇತನ ಶ್ರೇಣಿಗಳನ್ನು ಮತ್ತು ಒಟ್ಟು ಸಂಖ್ಯೆಯ ಹುದ್ದೆಗಳನ್ನು ಒಳಗೊಂಡಿದ್ದು, ಒಟ್ಟು ಹುದ್ದೆಗಳ ಸಂಖ್ಯೆ, ನೇಮಕಾತಿ ವಿಧಾನ ಮತ್ತು ಕನಿಷ್ಟ ವಿದ್ಯಾರ್ಹತೆಯನ್ನು ಅನುಕ್ರಮವಾಗಿ, ಅದರ ಅಂಕಣ (3), (4) ಮತ್ತು (5)ರಲ್ಲಿ ನಿರ್ದಿಷ್ಟ ಪಡಿಸಲಾಗಿದೆ.

3. **ನಿರಸನ ಮತ್ತು ಉಳಿಸುವಿಕೆಗಳು**:- ಕರ್ನಾಟಕ ರಾಜ್ಯ ತೋಟಗಾರಿಕೆ ಸೇವೆಗಳ (ನೇಮಕಾತಿ) ನಿಯಮಗಳು, 2008ನ್ನು ಈ ಮೂಲಕ ನಿರಸನಗೊಳಿಸಲಾಗಿದೆ.

Scanned with OKEN Scanner

www.sarkariblog.com



ಪರಂತು, ಅಂತಹ ನಿರಸನವು ಈ ಕೆಳಕಂಡ ಸಂದರ್ಭಗಳಲ್ಲಿ ಪರಿಣಾಮಗೊಳ್ಳತಕ್ಕದ್ದಲ್ಲ.

(ಅ) ಸದರಿ ನಿಯಮಗಳ ಪೂರ್ವ ಪ್ರವರ್ತನೆ ಅಥವಾ ಅದರ ಅಡಿಯಲ್ಲಿ ಕೈಗೊಂಡ ಸಮುಚಿತವಾದ ಕ್ರಮ ಅಥವಾ ಸಂತ್ರಸ್ಥಗೊಂಡ ಪ್ರಕರಣ ಅಥವಾ

(ಆ) ಸದರಿ ನಿಯಮಗಳ ಅಡಿಯಲ್ಲಿ ಅರ್ಜಿಸಿದ, ಪ್ರಾಪ್ತವಾದ ಅಥವಾ ವಹಿಸಲಾದ ಯಾವುದೇ ಹಕ್ಕು ವಿಶೇಷ ಅಧಿಕಾರ, ಬಾಧ್ಯತೆ ಅಥವಾ ಹೊಣೆಗಾರಿಕೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

Scanned with OKEN Scanner

www.sarkariblog.com



**ಅನುಸೂಚಿ**
**(ನಿಯಮ-2)**

| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| | | **ಸಾಮಾನ್ಯ** | | |
| 1 | ತೋಟಗಾರಿಕೆ ನಿರ್ದೇಶಕರು | 01 | ಭಾರತೀಯ ಆಡಳಿತ ಸೇವೆಯ ವೃಂದದಿಂದ ಎನ್ ಕೇಡರ್ | - |
| 2 | ತೋಟಗಾರಿಕೆ ಅಪರ ನಿರ್ದೇಶಕರು (82000-117700) | 04 | ತೋಟಗಾರಿಕೆ ಜಂಟಿ ನಿರ್ದೇಶಕರ ವೃಂದದಿಂದ **ಮುಂಬಡ್ತಿಯ ಮೂಲಕ** | ತೋಟಗಾರಿಕೆ ಜಂಟಿ ನಿರ್ದೇಶಕರ ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 3 | ತೋಟಗಾರಿಕೆ ಜಂಟಿ ನಿರ್ದೇಶಕರು (74400-109600) | 17 | ತೋಟಗಾರಿಕೆ ಉಪ ನಿರ್ದೇಶಕರ ವೃಂದದಿಂದ **ಮುಂಬಡ್ತಿಯ ಮೂಲಕ** | ತೋಟಗಾರಿಕೆ ಉಪ ನಿರ್ದೇಶಕರ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 4 | ಜಂಟಿ ನಿರ್ದೇಶಕರು (ಆಡಳಿತ) (74400-109600) | 01 | ಕರ್ನಾಟಕ ಆಡಳಿತ ಸೇವೆಯ (ಹಿರಿಯ ಶ್ರೇಣಿ) ದರ್ಜೆಯ ಅಧಿಕಾರಿಯ **ನಿಯೋಜನೆ ಮೂಲಕ** | - |
| 5 | ತೋಟಗಾರಿಕೆ ಉಪ ನಿರ್ದೇಶಕರು (67550-104600) | 59 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ವೃಂದದಿಂದ **ಮುಂಬಡ್ತಿಯ ಮೂಲಕ** | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 6 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (52650-97100) | 256 | **ಅ) ಶೇಕಡ ಹತ್ತರಷ್ಟು (10%)** ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021 ರನ್ವಯ ನೇರ ನೇಮಕಾತಿ ಮುಖಾಂತರ.<br><br>**ಆ) ಶೇಕಡ ತೊಂಬತ್ತರಷ್ಟು (90%)** ಹುದ್ದೆಗಳನ್ನು ಸಹಾಯಕ ತೋಟಗಾರಿಕೆ ನಿರ್ದೇಶಕರ ವೃಂದದಿಂದ **ಮುಂಬಡ್ತಿಯ ಮೂಲಕ** | **ನೇರ ನೇಮಕಾತಿ:**<br>ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ (ICAR) ನಿಂದ ಮಾನ್ಯತೆ ಪಡೆದಿರುವ ಮತ್ತು ಭಾರತದಲ್ಲಿ ಕಾನೂನಿನ ರೀತ್ಯ ಸ್ಥಾಪಿಸಲಾದ ವಿಶ್ವವಿದ್ಯಾಲಯದಿಂದ ತೋಟಗಾರಿಕೆ ವಿಷಯದಲ್ಲಿ B.Sc ಪದವಿ ಮತ್ತು ತೋಟಗಾರಿಕೆ ವಿಷಯದಲ್ಲಿ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು.<br>ಮುಂಬಡ್ತಿಗಾಗಿ:<br>ಸಹಾಯಕ ತೋಟಗಾರಿಕೆ ನಿರ್ದೇಶಕರ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 7 | ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರು (ಲ್ಯಾಂಡ್ ಸ್ಕೇಪ್) (52650-97100) | 1 | ಸಹಾಯಕ ತೋಟಗಾರಿಕೆ ನಿರ್ದೇಶಕರ (ಲ್ಯಾಂಡ್ ಸ್ಕೇಪ್) ವೃಂದದಿಂದ **ಮುಂಬಡ್ತಿಯ ಮೂಲಕ** | **ಮುಂಬಡ್ತಿಗಾಗಿ:**<br>ಸಹಾಯಕ ತೋಟಗಾರಿಕೆ ನಿರ್ದೇಶಕರ (ಲ್ಯಾಂಡ್ ಸ್ಕೇಪ್) ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು.<br>ಸೂಕ್ತ ಅಧಿಕಾರಿ ಲಭ್ಯವಿಲ್ಲದ ಪಕ್ಷದಲ್ಲಿ, ಪುಷ್ಪಾಭಿವೃದ್ಧಿ (Floriculture) ಸ್ನಾತಕೋತ್ತರ ಪದವಿಯನ್ನು ಹೊಂದಿರುವ ಸಮಾನ ಕೇಡರ್ ನಲ್ಲಿರುವ ಅಧಿಕಾರಿಯನ್ನು ತೋಟಗಾರಿಕೆ ಇಲಾಖೆಯಿಂದ ವರ್ಗಾವಣೆ ಮೂಲಕ. |
| 8 | ಸಹಾಯಕ ತೋಟಗಾರಿಕೆ ನಿರ್ದೇಶಕರು (43100-83900) | 475 | **ಅ) ಶೇಕಡ ಹತ್ತರಷ್ಟು (10%)** ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ ನೇರ ನೇಮಕಾತಿ ಮುಖಾಂತರ.<br><br>**ಆ) ಶೇಕಡ ತೊಂಬತ್ತರಷ್ಟು (90%)** ಹುದ್ದೆಗಳನ್ನು ಸಹಾಯಕ ತೋಟಗಾರಿಕೆ ಅಧಿಕಾರಿ ವೃಂದದಿಂದ ಮುಂಬಡ್ತಿಯ ಮೂಲಕ | **ನೇರ ನೇಮಕಾತಿ:**<br>ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ (ICAR) ನಿಂದ ಮಾನ್ಯತೆ ಪಡೆದಿರುವ ಮತ್ತು ಭಾರತದಲ್ಲಿ ಕಾನೂನಿನ ರೀತ್ಯ ಸ್ಥಾಪಿಸಲಾದ ವಿಶ್ವವಿದ್ಯಾಲಯದಿಂದ ತೋಟಗಾರಿಕೆ ವಿಷಯದಲ್ಲಿ B.Sc ಪದವಿ ಹಾಗೂ ಸ್ನಾತಕೋತ್ತರ ಪದವಿಯನ್ನು ಹೊಂದಿರತಕ್ಕದ್ದು.<br><br>**ಮುಂಬಡ್ತಿಗಾಗಿ**:<br>ಸಹಾಯಕ ತೋಟಗಾರಿಕೆ ಅಧಿಕಾರಿ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 9 | ಸಹಾಯಕ ತೋಟಗಾರಿಕೆ ನಿರ್ದೇಶಕರು (ಲ್ಯಾಂಡ್‌ಸ್ಕೇಪ್) (43100-83900) | 01 | ಸಹಾಯಕ ಲ್ಯಾಂಡ್‌ಸ್ಕೇಪ್ ಅಧಿಕಾರಿಯ ಕೇಡರ್ ನಿಂದ ಬಡ್ತಿ ನೀಡುವ ಮೂಲಕ.<br><br>ಅರ್ಹ ಅಧಿಕಾರಿ ಲಭ್ಯವಿಲ್ಲದಿದ್ದರೆ, ಪುಷ್ಪಾಭಿವೃದ್ಧಿ (Floriculture) ಸ್ನಾತಕೋತ್ತರ ಪದವಿ ಹೊಂದಿರುವ ತೋಟಗಾರಿಕೆ ಇಲಾಖೆಯ ಸಹಾಯಕ ತೋಟಗಾರಿಕೆ ನಿರ್ದೇಶಕರು ವೃಂದದ ಅಧಿಕಾರಿಯನ್ನು **ವರ್ಗಾವಣೆ ಮಾಡುವ ಮೂಲಕ** | **ಮುಂಬಡ್ತಿಗಾಗಿ:**<br>ಸಹಾಯಕ ತೋಟಗಾರಿಕೆ ಅಧಿಕಾರಿ (ಲ್ಯಾಂಡ್‌ಸ್ಕೇಪ್) ವೃಂದದಲ್ಲಿ 03 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 10 | ಜೇನುಕೃಷಿ ಅಭಿವೃದ್ಧಿ ಅಧಿಕಾರಿ (43100-83900) | 01 | ಜೇನುಕೃಷಿ ಸಂಘಟಕರು ವೃಂದದಿಂದ ಮುಂಬಡ್ತಿಯ ಮೂಲಕ | **ಮುಂಬಡ್ತಿಗಾಗಿ:**<br>ಜೇನುಕೃಷಿ ಸಂಘಟಕರು ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 11 | ಸಹಾಯಕ ತೋಟಗಾರಿಕೆ ಅಧಿಕಾರಿ (40900-78200) | 1136 | **ಶೇಕಡ ತೊಂಬತ್ತರಷ್ಟು (90%)** ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ ನೇರನೇಮಕಾತಿ ಮುಖಾಂತರ<br><br>**ಶೇಕಡ ಹತ್ತರಷ್ಟು (10%)** ಹುದ್ದೆಗಳನ್ನು ತೋಟಗಾರಿಕೆ ಸಹಾಯಕ ವೃಂದದಿಂದ ಮುಂಬಡ್ತಿಯ ಮೂಲಕ. | **ನೇರ ನೇಮಕಾತಿಗಾಗಿ:**<br>ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ (ICAR) ನಿಂದ ಮಾನ್ಯತೆ ಪಡೆದಿರುವ ಮತ್ತು ಭಾರತದಲ್ಲಿ ಕಾನೂನಿನ ರೀತ್ಯ ಸ್ಥಾಪಿಸಲಾದ ವಿಶ್ವವಿದ್ಯಾಲಯದಿಂದ ತೋಟಗಾರಿಕೆ ವಿಷಯದಲ್ಲಿ B.Sc ಪದವಿಯನ್ನು ಹೊಂದಿರತಕ್ಕದ್ದು.<br>**ಮುಂಬಡ್ತಿಗಾಗಿ :**<br>ತೋಟಗಾರಿಕೆ ಸಹಾಯಕ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 12 | ಸಹಾಯಕ ಲ್ಯಾಂಡ್‌ಸ್ಕೇಪ್ ಅಧಿಕಾರಿ (33450-62600) | 03 | ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021 ರನ್ವಯ ನೇರ ನೇಮಕಾತಿ ಮುಖಾಂತರ. | **ನೇರ ನೇಮಕಾತಿ:**<br>ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ (ICAR) ನಿಂದ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಪುಷ್ಪಾಭಿವೃದ್ಧಿ (Floriculture) / ಲ್ಯಾಂಡ್‌ಸ್ಕೇಪ್ M.Sc ಪಡೆದಿರಬೇಕು |
| 13 | ಜೇನು ಕೃಷಿ ಸಂಘಟಕರು (37900-70850) | 07 | 1) 2 ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021 ರನ್ವಯ ನೇರನೇಮಕಾತಿ ಮುಖಾಂತರ.<br><br>2) 5 ಹುದ್ದೆಗಳನ್ನು ಜೇನು ಕೃಷಿ ಪ್ರದರ್ಶಕರು ವೃಂದದಿಂದ ಮುಂಬಡ್ತಿಯ ಮೂಲಕ. | **ನೇರ ನೇಮಕಾತಿ:**<br>ಪ್ರಾಣಿಶಾಸ್ತ್ರ ಮತ್ತು ಸಸ್ಯಶಾಸ್ತ್ರ ಅಥವಾ ತೋಟಗಾರಿಕೆ ವಿಷಯಗಳೊಂದಿಗೆ ವಿಜ್ಞಾನದಲ್ಲಿ ಪದವಿಯನ್ನು ಹೊಂದಿರಬೇಕು ಮತ್ತು ಭಾಗಮಂಡಲ ಜೇನುಸಾಕಣೆ ತರಬೇತಿ ಕೇಂದ್ರ ಕೊಡಗು ಜಿಲ್ಲೆಯಲ್ಲಿ ಕನಿಷ್ಠ ಮೂರು ತಿಂಗಳ ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು. ಅಥವಾ ಕರ್ನಾಟಕದಲ್ಲಿ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ ಅಥವಾ ಕರ್ನಾಟಕ ತೋಟಗಾರಿಕೆ ಇಲಾಖೆಯು ನಡೆಸುವ ಜೇನು ಸಾಕಣೆಯಲ್ಲಿ ಕನಿಷ್ಠ ಮೂರು ತಿಂಗಳ ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು.<br>**ಮುಂಬಡ್ತಿಗಾಗಿ:-**<br>ಜೇನು ಕೃಷಿ ಪ್ರದರ್ಶಕರು ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 14 | ತೋಟಗಾರಿಕೆ ಸಹಾಯಕ<br><br>(23500-47650) | 926 | **ಶೇಕಡ ಇಪ್ಪತ್ತರಷ್ಟು (20%)** ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021 ರನ್ವಯ ನೇರನೇಮಕಾತಿ ಮುಖಾಂತರ.<br><br>**ಶೇಕಡ ಎಂಬತ್ತರಷ್ಟು (80%)** ಹುದ್ದೆಗಳನ್ನು ಮುಖ್ಯ ತೋಟಗಾರರು ವೃಂದದಿಂದ ಮುಂಬಡ್ತಿಯ ಮೂಲಕ | **ನೇರ ನೇಮಕಾತಿ:**<br>ಇಂಡಿಯನ್ ಕೌನ್ಸಿಲ್ ಆಫ್ ಅಗ್ರಿಕಲ್ಚರ್ ರಿಸರ್ಚ್ (ICAR) ನಿಂದ ಮಾನ್ಯತೆ ಪಡೆದಿರುವ ಮತ್ತು ಭಾರತದಲ್ಲಿ ಕಾನೂನಿನ ರೀತ್ಯ ಸ್ಥಾಪಿಸಲಾದ ವಿಶ್ವವಿದ್ಯಾಲಯದಿಂದ ತೋಟಗಾರಿಕೆ ವಿಷಯದಲ್ಲಿ B.Sc ಪದವಿಯನ್ನು ಹೊಂದಿರತಕ್ಕದ್ದು.<br>**ಮುಂಬಡ್ತಿಗಾಗಿ :**<br>ಅ) ಎಸ್.ಎಸ್.ಎಲ್.ಸಿ. ಮತ್ತು ತೋಟಗಾರಿಕೆ ಇಲಾಖೆಯು ನಡೆಸುವ 10 ತಿಂಗಳ ತರಬೇತಿ ಪೂರೈಸಿರಬೇಕು ಅಥವಾ ತೋಟಗಾರಿಕೆ ವಿಶ್ವವಿದ್ಯಾಲಯದ ವತಿಯಿಂದ ತೋಟಗಾರಿಕೆ ವಿಷಯದಲ್ಲಿ ಡಿಪ್ಲೋಮಾ ಪಡೆದಿರಬೇಕು ಅಥವಾ ಸರ್ಕಾರ/ಸರ್ಕಾರದಿಂದ ಅನುಮೋದಿತ ಸಂಸ್ಥೆಗಳು ನಡೆಸುವ JOC ಕೋರ್ಸ್ ಪಡೆದಿರಬೇಕು.<br>ಆ) ಮುಖ್ಯ ತೋಟಗಾರ ವೃಂದದಲ್ಲಿ ಕನಿಷ್ಠ 10 ವರ್ಷ ಸೇವೆ ಸಲ್ಲಿಸಿರಬೇಕು. |
| 15 | ಜೇನು ಕೃಷಿ ಪ್ರದರ್ಶಕರು (23500-47650) | 27 | **ಅ) ನೇರ ನೇಮಕಾತಿಯಿಂದ 07** ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021 ರನ್ವಯ ನೇರನೇಮಕಾತಿ ಮುಖಾಂತರ.<br><br>**ಆ) ಮುಂಬಡ್ತಿಯಿಂದ 20** ಹುದ್ದೆಗಳನ್ನು ಮುಖ್ಯ ಜೇನು ಕೃಷಿ ಸಹಾಯಕ ವೃಂದದಿಂದ ಮುಂಬಡ್ತಿ ಮೂಲಕ | **ನೇರ ನೇಮಕಾತಿಗಾಗಿ:**<br>ಪಿ.ಯು.ಸಿ. ವಿಜ್ಞಾನ ವಿಷಯದಲ್ಲಿ ತೇರ್ಗಡೆ ಹೊಂದಿರತಕ್ಕದ್ದು ಮತ್ತು ಭಾಗಮಂಡಲ ಜೇನು ಸಾಕಣೆ ತರಬೇತಿ ಕೇಂದ್ರ ಕೊಡಗು ಜಿಲ್ಲೆಯಲ್ಲಿ ಕನಿಷ್ಠ ಮೂರು ತಿಂಗಳ ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು. ಅಥವಾ ಕರ್ನಾಟಕದಲ್ಲಿ ಮಾನ್ಯತೆ |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| | | | | ಪಡೆದ ವಿಶ್ವವಿದ್ಯಾನಿಲಯ ಅಥವಾ ತೋಟಗಾರಿಕೆ ಇಲಾಖೆಯು ಜೇನು ಸಾಕಣೆಯಲ್ಲಿ ನಡೆಸುವ ಕನಿಷ್ಠ ಮೂರು ತಿಂಗಳ ತರಬೇತಿ ಪ್ರಮಾಣ ಪತ್ರ ಹೊಂದಿರಬೇಕು.<br>**ಮುಂಬಡ್ತಿಗಾಗಿ:**<br>ಜೇನು ಕೃಷಿ ಸಹಾಯಕರು ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 16 | ಮುಖ್ಯ ತೋಟಗಾರರು (19750-37900) | 187 | ತೋಟಗಾರರ ವೃಂದದಿಂದ **ಮುಂಬಡ್ತಿ ಮೂಲಕ** | ತೋಟಗಾರರು ವೃಂದದಲ್ಲಿ ಹತ್ತು ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 17 | ಲ್ಯಾಬ್ ಅಸಿಸ್ಟಂಟ್ (18600-32600) | 13 | ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ **ನೇರ ನೇಮಕಾತಿ ಮುಖಾಂತರ.** | ಲ್ಯಾಬ್ ನಿರ್ವಹಣೆಯಲ್ಲಿ ಡಿಪ್ಲೊಮಾ ಜೊತೆಗೆ PUC (ವಿಜ್ಞಾನ) ಉತ್ತೀರ್ಣರಾಗಿರತಕ್ಕದ್ದು ಮತ್ತು ಯಾವುದೇ NABL ಮಾನ್ಯತೆ ಪಡೆದ ಪ್ರಯೋಗಾಲಯದಲ್ಲಿ ಮೂರು ವರ್ಷಗಳ ಕನಿಷ್ಠ ಅನುಭವ ಹೊಂದಿರತಕ್ಕದ್ದು. |
| 18 | ಜೇನು ಕೃಷಿ ಸಹಾಯಕರು (18600-32600) | 20 | ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ **ನೇರ ನೇಮಕಾತಿ ಮುಖಾಂತರ.** | **ನೇರ ನೇಮಕಾತಿಗಾಗಿ:**<br>ಎಸ್.ಎಸ್.ಎಲ್.ಸಿ.ಯಲ್ಲಿ ತೇರ್ಗಡೆ ಹೊಂದಿರತಕ್ಕದ್ದು ಮತ್ತು ಭಾಗಮಂಡಲ ಜೇನು ಸಾಕಣೆ ತರಬೇತಿ ಕೇಂದ್ರ ಕೊಡಗು ಜಿಲ್ಲೆಯಲ್ಲಿ ಕನಿಷ್ಠ ಮೂರು ತಿಂಗಳ ತರಬೇತಿ ಪಡೆದಿರುವ ಪ್ರಮಾಣ ಪತ್ರ ಹೊಂದಿರಬೇಕು. ಅಥವಾ ಕರ್ನಾಟಕದಲ್ಲಿ ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ ಅಥವಾ ತೋಟಗಾರಿಕೆ |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| | | | | ಇಲಾಖೆಯು ನಡೆಸುವ ಜೇನುಸಾಕಣೆ ವಿಷಯದಲ್ಲಿ ನಡೆಸುವ ಕನಿಷ್ಠ ಮೂರು ತಿಂಗಳ ತರಬೇತಿ ಪ್ರಮಾಣ ಪತ್ರ ಹೊಂದಿರಬೇಕು. |
| 19 | ತೋಟಗಾರ (17000-28950) | 1774 | ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ **ನೇರ ನೇಮಕಾತಿ ಮುಖಾಂತರ.** | **ನೇರ ನೇಮಕಾತಿಗಾಗಿ:**<br>1.ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿರತಕ್ಕದ್ದು. ಮತ್ತು ಕರ್ನಾಟಕ ತೋಟಗಾರಿಕೆ ಇಲಾಖೆಯಿಂದ 10 ತಿಂಗಳ ತೋಟಗಾರಿಕೆ ತರಬೇತಿಯನ್ನು ಪಡೆದಿರುವ ಪ್ರಮಾಣ ಪತ್ರ ಹೊಂದಿರತಕ್ಕದ್ದು. ಅಥವಾ<br>2. ಎಸ್.ಎಸ್. ಎಲ್.ಸಿ ಮತ್ತು ಭಾರತದಲ್ಲಿ ಕಾನೂನಿನಿಂದ ಸ್ಥಾಪಿಸಲ್ಪಟ್ಟ ಮತ್ತು ಭಾರತೀಯ ಕೃಷಿ ಸಂಶೋಧನಾ ಮಂಡಳಿಯಿಂದ (ICAR) ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಡಿಪ್ಲೊಮಾ (ತೋಟಗಾರಿಕೆ) ಹೊಂದಿರತಕ್ಕದ್ದು. |
| | | | **ಆಡಳಿತ** | |
| 1 | ಆಡಳಿತಾಧಿಕಾರಿ (52650-97100) | 01 | **ಮುಂಬಡ್ತಿ ಮೂಲಕ :**<br>ಸಹಾಯಕ ಆಡಳಿತಾಧಿಕಾರಿಯ ವೃಂದದಿಂದ ಅಥವಾ<br>ಬಡ್ತಿಗೆ ಯಾವುದೇ ಸೂಕ್ತ ಅಧಿಕಾರಿ ಲಭ್ಯವಿಲ್ಲದಿದ್ದಲ್ಲಿ, ಕರ್ನಾಟಕ ಆಡಳಿತ ಸೇವೆಯಿಂದ (ಕಿರಿಯ ಶ್ರೇಣಿ) ಅಧಿಕಾರಿಯ ನಿಯೋಜನೆಯ ಮೂಲಕ ಅಥವಾ ಹಿರಿಯ ಸಹಾಯಕ ತೋಟಗಾರಿಕೆ ನಿರ್ದೇಶಕರ ವೃಂದದಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರುವ ತೋಟಗಾರಿಕೆ ಇಲಾಖೆಯ ಗ್ರೂಪ್-ಎ ಅಧಿಕಾರಿಯನ್ನು ನೇಮಿಸುವ ಮೂಲಕ. | ಸಹಾಯಕ ಆಡಳಿತಾಧಿಕಾರಿ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| | | | | |
| 2 | ಸಹಾಯಕ ಆಡಳಿತಾಧಿಕಾರಿ (43100-83900) | 4 | ವ್ಯವಸ್ಥಾಪಕರು ವೃಂದದಿಂದ **ಮುಂಬಡ್ತಿ ಮೂಲಕ** | ವ್ಯವಸ್ಥಾಪಕರು ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 3 | ವ್ಯವಸ್ಥಾಪಕರು (40900-78200) | 19 | ಅಧೀಕ್ಷಕರು ವೃಂದದಿಂದ **ಮುಂಬಡ್ತಿ ಮೂಲಕ** | ಅಧೀಕ್ಷಕರು ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ಸೇವೆಯನ್ನು ಸಲ್ಲಿಸಿರತಕ್ಕದ್ದು |
| 4 | ಲೆಕ್ಕ ಅಧೀಕ್ಷಕರು (40900-78200) | 08 | **ನಿಯೋಜನೆ ಮೂಲಕ**:<br>ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ಸಮಾನ ವೃಂದದ ಅಧಿಕಾರಿ. | - |
| 5 | ಅಧೀಕ್ಷಕರು (37900-70850) | 180 | **ಮುಂಬಡ್ತಿ ಮೂಲಕ**:<br>ಪ್ರಥಮ ದರ್ಜೆ ಸಹಾಯಕರ ವೃಂದದಿಂದ ಮತ್ತು ಶೀಘ್ರಲಿಪಿಗಾರರ ವೃಂದದಿಂದ 16:1ರ ಅನುಪಾತದಲ್ಲಿ.<br>(ಪ್ರತಿ 17ನೇ ಖಾಲಿ ಹುದ್ದೆಯನ್ನು ಶೀಘ್ರಲಿಪಿಗಾರರಿಂದ ಬಡ್ತಿ ಮೂಲಕ ಭರ್ತಿ ಮಾಡಲಾಗುವುದು.)<br>ಶೀಘ್ರಲಿಪಿಗಾರರನ್ನು ಹಿರಿತನದ ಆಧಾರದ ಮೇಲೆ 1 ವರ್ಷದ ಅವಧಿಗೆ ಪ್ರಥಮ ದರ್ಜೆ ಸಹಾಯಕರ ಹುದ್ದೆಯಲ್ಲಿ ನೇಮಿಸತಕ್ಕದ್ದು. | ಮುಂಬಡ್ತಿಗಾಗಿ:<br>1) ಪ್ರಥಮ ದರ್ಜೆ ಸಹಾಯಕರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು.<br>2) ಶೀಘ್ರಲಿಪಿಗಾರರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು ಮತ್ತು ಪ್ರಥಮ ದರ್ಜೆ ಸಹಾಯಕರ ವೃಂದಲ್ಲಿ ಒಂದು ವರ್ಷಕ್ಕಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು.<br>ಟಿಪ್ಪಣಿ: ಶೀಘ್ರಲಿಪಿಗಾರರು ಸೂಪರಿಂಟೆಂಡೆಂಟ್ ಹುದ್ದೆಗೆ ಬಡ್ತಿಗಾಗಿ ಪರಿಗಣಿಸಲು ಲಿಖಿತವಾಗಿ ಆಯ್ಕೆಯನ್ನು ತಿಳಿಸದ ಹೊರತು ಅವರನ್ನು ಬಡ್ತಿಗೆ ಪರಿಗಣಿಸಲಾಗುವುದಿಲ್ಲ. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 6 | ಪ್ರಥಮ ದರ್ಜೆ ಸಹಾಯಕ (27650-52650) | 311 | 1) **ನೇರ ನೇಮಕಾತಿ ಮೂಲಕ** : ಶೇಕಡ ಐವತ್ತರಷ್ಟು (50%) ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ ನೇರ ನೇಮಕಾತಿ ಮುಖಾಂತರ.<br>**2) ಮುಂಬಡ್ತಿ ಮೂಲಕ :** ಶೇಕಡ ಐವತ್ತರಷ್ಟು (50%) ಹುದ್ದೆಗಳನ್ನು ದ್ವಿತಿಯ ದರ್ಜೆ ಸಹಾಯಕರ ವೃಂದದಿಂದ. | **ನೇರ ನೇಮಕಾತಿಗಾಗಿ:** ಕಾನೂನಿನ ಮೂಲಕ ಸ್ಥಾಪಿತವಾದ ವಿಶ್ವವಿದ್ಯಾನಿಲಯದಲ್ಲಿ ಪದವಿಯನ್ನು ಹೊಂದಿರತಕ್ಕದ್ದು.<br>**ಮುಂಬಡ್ತಿಗಾಗಿ:** ದ್ವಿತೀಯ ದರ್ಜೆ ಸಹಾಯಕರ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರ ತಕ್ಕದ್ದು. |
| 7 | ಶೀಘ್ರಲಿಪಿಗಾರರು (27650-52650) | 11 | **ನೇರ ನೇಮಕಾತಿ ಮೂಲಕ** : ಶೇಕಡ ಐವತ್ತರಷ್ಟು **(50%)** ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, 1983ರ ಅನುಸಾರವಾಗಿ ಭರ್ತಿ ಮಾಡತಕ್ಕದ್ದು.<br><br>ಶೇಕಡ ಐವತ್ತರಷ್ಟು (50%) ಮುಂಬಡ್ತಿ ಮೂಲಕ : ದತ್ತಾಂಶ ನಮೂದಕ ಸಹಾಯಕರ ವೃಂದದಿಂದ. ಮುಂಬಡ್ತಿಗೆ ಅರ್ಹ ದತ್ತಾಂಶ ನಮೂದಕರು ಲಭ್ಯವಿದಿದ್ದಲ್ಲಿ ದ್ವಿತೀಯ ದರ್ಜೆ ಸಹಾಯಕ ವೃಂದದಿಂದ **ಮುಂಬಡ್ತಿ ಮೂಲಕ** | **ನೇರ ನೇಮಕಾತಿಗಾಗಿ:** ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರುವುದರ ಜೊತೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಕೆ.ಎಸ್.ಇ.ಇ.ಬಿ )ಯಿಂದ ನಡೆಸಲಾಗುವ ಕನ್ನಡ ಹಿರಿಯ ಬೆರಳಚ್ಚು ಮತ್ತು ಹಿರಿಯ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿತಕ್ಕದ್ದು ಅಥವಾ ಕರ್ನಾಟಕ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ನೀಡಲಾದ ಕನ್ನಡ ಶೀಘ್ರಲಿಪಿಯಲ್ಲಿ ಐಚ್ಛಿಕದೊಂದಿಗೆ ಸೆಕ್ರೆಟೇರಿಯಲ್ ಪ್ರಾಕ್ಟೀಸ್ ಡಿಪ್ಲೋಮಾವನ್ನು ಪಡೆದಿರತಕ್ಕದ್ದು<br>**ಮುಂಬಡ್ತಿಗಾಗಿ:** ದತ್ತಾಂಶ ನಮೂದಕ ಸಹಾಯಕರ ವೃಂದದಲ್ಲಿ ಅಥವಾ ದ್ವಿತೀಯ ದರ್ಜೆ ಸಹಾಯಕ ವೃಂದದಲ್ಲಿ ಐದು ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು ಮತ್ತು ಕನ್ನಡ ಹಿರಿಯ ಬೆರಳಚ್ಚು ಮತ್ತು ಹಿರಿಯ ಶೀಘ್ರಲಿಪಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು . |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 8 | ಹಿರಿಯ ದತ್ತಾಂಶ ನಮೂದಕ ಸಹಾಯಕರು (27650-52650) | 14 | ದತ್ತಾಂಶ ನಮೂದಕ ಸಹಾಯಕರ ವೃಂದದಿಂದ **ಮುಂಬಡ್ತಿ ಮೂಲಕ** | **ಮುಂಬಡ್ತಿಗಾಗಿ:** ದತ್ತಾಂಶ ನಮೂದಕ ಸಹಾಯಕರ ವೃಂದದಲ್ಲಿ 10 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 9 | ಹಿರಿಯ ವಾಹನ ಚಾಲಕರು (27650-52650) | 26 | ವಾಹನ ಚಾಲಕ ವೃಂದದಿಂದ **ಮುಂಬಡ್ತಿ ಮೂಲಕ** | **ಮುಂಬಡ್ತಿಗಾಗಿ:** ವಾಹನ ಚಾಲಕ ವೃಂದದಲ್ಲಿ 10 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 10 | ದ್ವಿತೀಯ ದರ್ಜೆ ಸಹಾಯಕ (21400-42000) | 271 | **ನೇರ ನೇಮಕಾತಿ ಮೂಲಕ** : ಶೇಕಡ ತೊಂಬತ್ತುರಷ್ಟು (90%) ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರ ನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ ಮತ್ತು<br>2) ಮುಂಬಡ್ತಿ ಮೂಲಕ:<br>ಶೇಕಡ ಹತ್ತರಷ್ಟು (10%) ಹುದ್ದೆಗಳನ್ನು ಅಟೆಂಡರ್ ವೃಂದದಿಂದ. | ನೇರ ನೇಮಕಾತಿಗಾಗಿ: ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರತಕ್ಕದ್ದು.<br>**ಮುಂಬಡ್ತಿಗಾಗಿ:**<br>ಎಸ್.ಎಸ್.ಎಲ್.ಸಿ. ಉತೀರ್ಣರಾಗಿರತಕ್ಕದ್ದು, ಅಟೆಂಡರ್ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು. |
| 11 | ದತ್ತಾಂಶ ನಮೂದಕ ಸಹಾಯಕರು (21400-42000) | 58 | **ನೇರ ನೇಮಕಾತಿ ಮೂಲಕ:** ಕರ್ನಾಟಕ ಸಿವಿಲ್ ಸೇವಾ (ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರ ಹುದ್ದೆಗಳ ನೇಮಕಾತಿ) ನಿಯಮಗಳು, (ತಿದ್ದುಪಡಿ)2001ರ ಅನುಸಾರವಾಗಿ ಭರ್ತಿ ಮಾಡತಕ್ಕದ್ದು. | **ನೇರ ನೇಮಕಾತಿಗಾಗಿ:** ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿರುವುದರ ಜೊತೆಗೆ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ (ಕೆ.ಎಸ್.ಇ.ಇ.ಬಿ )ಯಿಂದ ನಡೆಸಲಾಗುವ ಕನ್ನಡ ಹಿರಿಯ ಬೆರಳಚ್ಚು ಪರೀಕ್ಷೆಯಲ್ಲಿ ಉತ್ತೀರ್ಣರಾಗಿತಕ್ಕದ್ದು ಅಥವಾ ಕರ್ನಾಟಕ ತಾಂತ್ರಿಕ ಶಿಕ್ಷಣ ಮಂಡಳಿಯಿಂದ ನೀಡಲಾದ ಕಮರ್ಷಿಯಲ್ ಪ್ರ್ಯಾಕ್ಟೀಸ್ ಮತ್ತು ಕನ್ನಡ ಹಿರಿಯ ಬೆರಳಚ್ಚು ನಲ್ಲಿ ಡಿಪ್ಲೋಮಾವನ್ನು ಪಡೆದಿರತಕ್ಕದ್ದು. |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 12 | ವಾಹನ ಚಾಲಕರು (21400-42000) | 87 | **1) ನೇರ ನೇಮಕಾತಿ ಮೂಲಕ** : ಶೇಕಡ ತೊಂಬತ್ತರಷ್ಟು (90%) ಹುದ್ದೆಗಳನ್ನು ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ ಮತ್ತು<br>2) **ಮುಂಬಡ್ತಿ ಮೂಲಕ :** ಶೇಕಡ ಹತ್ತರಷ್ಟು (10%) ಹುದ್ದೆಗಳನ್ನು ಸಂಯೋಜಿತ ಜೇಷ್ಠತೆ ಆಧಾರ ಮೇಲೆ ಸಮೂಹ "ಡಿ" ಸೇವೆಯಲ್ಲಿನ ಯಾವುದೇ ವೃಂದದಿಂದ ಮುಂಬಡ್ತಿ ಮೂಲಕ: ಹೆಚ್ಚಿನ ವೇತನ ಶ್ರೇಣಿಯನ್ನುಳ್ಳ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಯನ್ನು ಕಡಿಮೆ ವೇತನ ಶ್ರೇಣಿಯನ್ನುಳ್ಳ ಹುದ್ದೆಯನ್ನು ಧಾರಣ ಮಾಡಿರುವ ವ್ಯಕ್ತಿಗಿಂತ ಹಿರಿಯನೆಂದು ಪರಿಗಣಿಸಿ ಸೇವಾ ಜೇಷ್ಠತೆಯನ್ನು ನಿರ್ಧರಿಸಲಾಗುತ್ತದೆ. ಒಂದೇ ವೇತನ ಶ್ರೇಣಿಯ ಹುದ್ದೆಗಳನ್ನು ಹೊಂದಿರುವ ವ್ಯಕ್ತಿಗಳ ಪೈಕಿ ಜೇಷ್ಠತೆಯನ್ನು, ಸಂಬಂಧಪಟ್ಟ ವೃಂದಗಳಲ್ಲಿನ ಸೇವಾವಧಿಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಮತ್ತು ಆ ವೃಂದದಲ್ಲಿರುವ ವ್ಯಕ್ತಿಗಳ ಪೈಕಿ ಜೇಷ್ಠತೆಯನ್ನು ನಿರ್ವಹಿಸಿಕೊಂಡು ಬರತಕ್ಕದ್ದು. | **ನೇರ ನೇಮಕಾತಿಗಾಗಿ:** ಹತ್ತನೇ ತರಗತಿಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು ಮತ್ತು ಲಘು ವಾಹನ ಡ್ರೈವಿಂಗ್ ಲೈಸನ್ಸ್‌ನ್ನು ಹೊಂದಿರತಕ್ಕದ್ದು. ಮತ್ತು ಆಯ್ಕೆ ಮಾಡುವ ಏಜೆನ್ಸಿಯಿಂದ ಆಯ್ಕೆಯಾದ ನಿಕಟ ತರುವಾಯ, ಅಭ್ಯರ್ಥಿಯು ಪೊಲೀಸ್ ಡ್ರೈವಿಂಗ್ ಮತ್ತು ನಿರ್ವಹಣಾ ಶಾಲೆಯಿಂದ, ಆ ಶಾಲೆಯು ನಡೆಸಿದ ಪರೀಕ್ಷೆಯಲ್ಲಿ ತೇರ್ಗಡೆಹೊಂದಿರುವ ಬಗ್ಗೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.<br><br>**ಮುಂಬಡ್ತಿಗಾಗಿ:** ಎಸ್.ಎಸ್.ಎಲ್.ಸಿ. ಉತ್ತೀರ್ಣರಾ ಗಿರತಕ್ಕದ್ದು, ಮತ್ತು ಅಧಿಕೃತ ಲಘು ವಾಹನ ಡ್ರೈವಿಂಗ್ ಲೈಸನ್ಸ್‌ನ್ನು ಹೊಂದಿರತಕ್ಕದ್ದು.<br>ಗ್ರೂಪ್-ಡಿ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು |
| 13 | ಅಟೆಂಡರ್ (19950-37900) | 38 | ಜವಾನ ವೃಂದದಿಂದ **ಮುಂಬಡ್ತಿ ಮೂಲಕ** | **ಮುಂಬಡ್ತಿಗಾಗಿ:** ಜವಾನ ವೃಂದದಲ್ಲಿ 05 ವರ್ಷಗಳಿಗಿಂತ ಕಡಿಮೆಯಿಲ್ಲದ ಸೇವೆಯನ್ನು ಸಲ್ಲಿಸಿರತಕ್ಕದ್ದು |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 14 | ಜವಾನ<br>(17000-28950) | 98 | **ನೇರ ನೇಮಕಾತಿ ಮೂಲಕ**: ಕರ್ನಾಟಕ ನಾಗರೀಕ ಸೇವಾ (ನೇರನೇಮಕಾತಿ) (ಸಾಮಾನ್ಯ) ನಿಯಮಗಳು-2021ರನ್ವಯ | **ನೇರ ನೇಮಕಾತಿಗಾಗಿ**:<br>ಎಸ್.ಎಸ್.ಎಲ್.ಸಿ. / 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು |
| 15 | ಕಾವಲುಗಾರ<br>(17000-28950) | 29 | **ನೇರ ನೇಮಕಾತಿ ಮೂಲಕ.** | **ನೇರ ನೇಮಕಾತಿಗಾಗಿ**:<br>ಎಸ್.ಎಸ್.ಎಲ್.ಸಿ. / 10ನೇ ತರಗತಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರತಕ್ಕದ್ದು. |
| | | | ಲೆಕ್ಕ ಪತ್ರ (ನಿಯೋಜನೆ) | |
| 1 | ಮುಖ್ಯ ವ್ಯವಸ್ಥಾಪಕರು<br>(74400-109600) | 01 | **ನಿಯೋಜನೆ ಮೂಲಕ:**<br>ಕೃಷಿ ಮಾರುಕಟ್ಟೆ ಇಲಾಖೆಯಿಂದ ಸಮಾನಾಂತರ ಹುದ್ದೆ. | - |
| 2 | ಮುಖ್ಯ ಲೆಕ್ಕಾಧಿಕಾರಿ<br>(74400-109600) | 01 | **ನಿಯೋಜನೆ ಮೂಲಕ**:<br>ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ಜಂಟಿ ನಿಯಂತ್ರಕರ (ಆರ್ಥಿಕ) ವೃಂದ ಅಥವಾ ಉನ್ನತ ವೃಂದದಿಂದ. | |
| 3 | ಲೆಕ್ಕಾಧಿಕಾರಿ<br>(52650-97100) | 01 | **ನಿಯೋಜನೆ ಮೂಲಕ**:<br>ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ಸಮಾನ ವೃಂದದ ಅಧಿಕಾರಿ. | |
| 4 | ಲೆಕ್ಕ ಪರಿಶೋಧನಾಧಿಕಾರಿ<br>(43100-83900) | 01 | **ನಿಯೋಜನೆ ಮೂಲಕ**:<br>ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕ ಪತ್ರ ಇಲಾಖೆಯಿಂದ ಸಮಾನ ವೃಂದದ ಅಧಿಕಾರಿ. | |

Scanned with OKEN Scanner

www.sarkariblog.com



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| 5 | ಕಂಪ್ಯೂಟರ್ ಆಪರೇಟರ್ (27650-52650) | 01 | **ನಿಯೋಜನೆ ಮೂಲಕ**: ಮಾಹಿತಿ ಮತ್ತು ತಂತ್ರಜ್ಞಾನ ಇಲಾಖೆಯಿಂದ ಅಥವಾ ಇತರೆ ಇಲಾಖೆಯಿಂದ ಸಮಾನ ವೃಂದ | |
| | | | ತಾಂತ್ರಿಕ ಹುದ್ದೆಗಳು (ನಿಯೋಜನೆ) | |
| 1 | ಉಪ ನಿರ್ದೇಶಕರು (ಸಾಂಖ್ಯಿಕ) (67550-104600) | 01 | **ನಿಯೋಜನೆ ಮೂಲಕ**: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಸಮಾನ ವೃಂದ | |
| 2 | ಸಹಾಯಕ ನಿರ್ದೇಶಕರು (ಸಾಂಖ್ಯಿಕ) (43100-83900) | 01 | **ನಿಯೋಜನೆ ಮೂಲಕ**: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಸಮಾನ ವೃಂದ | |
| 3 | ಸಹಾಯಕ ಸಾಂಖ್ಯಿಕ ಅಧಿಕಾರಿ (37900-70850) | 27 | **ನಿಯೋಜನೆ ಮೂಲಕ**: ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆಯಿಂದ ಸಮಾನ ವೃಂದ. | |
| 4 | ಕಾರ್ಯಪಾಲಕ ಅಭಿಯಂತರರು (67550-104600) | 01 | **ನಿಯೋಜನೆ ಮೂಲಕ**: ಲೋಕೋಪಯೋಗಿ /ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ/ ರಾಜ್ಯ ಸರ್ಕಾರದ ಅಧೀನ ನಿಗಮ ಮಂಡಳಿಗಳಿಂದ ಸಮಾನ ವೃಂದ. | |
| 5 | ಸಹಾಯಕ ಅಭಿಯಂತರರು (43100-83900) | 01 | **ನಿಯೋಜನೆ ಮೂಲಕ**: ಲೋಕೋಪಯೋಗಿ / ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಿಂದ ಸಮಾನ ವೃಂದ. | |
| 6 | ಎಲೆಕ್ಟ್ರಿಷಿಯನ್ (21400-42000) | 01 | **ನಿಯೋಜನೆ ಮೂಲಕ**: ಮುಖ್ಯ ಎಲೆಕ್ಟ್ರಿಕಲ್ ಇನ್‌ಸ್ಪೆಕ್ಟರೇಟ್/ ಕರ್ನಾಟಕ ಸರ್ಕಾರದ ಅಧೀನದಲ್ಲಿ ಬರುವ ಬೋರ್ಡ್ ಮತ್ತು ಕಾರ್ಪೊರೇಷನ್‌ಗಳಿಂದ ಸಮಾನವಾದ | |

www.sarkariblog.com

R.N.I. No. KARBIL/2001/47147 POSTAL REGN. No. RNP/KA/BGS/2202/2017-19
Licensed to post without prepayment **WPP No. 297**



| ಕ್ರ ಸಂ | ಹುದ್ದೆಗಳ ಹೆಸರು ಮತ್ತು ವೇತನ ಶ್ರೇಣಿ | ಒಟ್ಟು ಹುದ್ದೆಗಳ ಸಂಖ್ಯೆ | ನೇಮಕಾತಿ ವಿಧಾನ | ಕನಿಷ್ಠ ವಿದ್ಯಾರ್ಹತೆ |
|---|---|---|---|---|
| 1 | 2 | 3 | 4 | 5 |
| | | | ಕೇಡರ್‌ನಲ್ಲಿರುವ ನೌಕರರು. | |
| 1 | ಕಾನೂನು ಅಧಿಕಾರಿ (67550-104600) | 01 | **ನಿಯೋಜನೆ ಮೂಲಕ**: ಪ್ರಾಸಿಕ್ಯೂಷನ್ಸ್ ಮತ್ತು ಸರ್ಕಾರಿ ವ್ಯಾಜ್ಯಗಳ ನಿರ್ದೇಶನಾಲಯದಿಂದ ಸಮಾನವಾದ ಕೇಡರ್‌ನಲ್ಲಿರುವ ಅಧಿಕಾರಿ / ಕರ್ನಾಟಕ ಸರ್ಕಾರದ ಇಲಾಖೆಗಳು ನಿಗಮ/ಮಂಡಳಿಗಳಿಂದ ಸಮಾನವಾದ ಕೇಡರ್‌ನಲ್ಲಿರುವ<br><br>ಅಧಿಕಾರಿ ಅಥವಾ ಭಾರತ ಸರ್ಕಾರದ ಯಾವುದೇ ಇಲಾಖೆ/ಮಂಡಳಿಗಳು ಮತ್ತು ನಿಗಮಗಳಿಂದ ಸಮಾನವಾದ ಕೇಡರ್‌ನಲ್ಲಿ ಪ್ರತಿನಿಧಿಸುವ ಮೂಲಕ ಮೇಲಿನಂತೆ ನಿಯೋಜನೆ ಮೂಲಕ ಭರ್ತಿ ಮಾಡಿಕೊಳ್ಳಲು ಯಾವುದೇ ಅಧಿಕಾರಿ ಲಭ್ಯವಿಲ್ಲದಿದ್ದ ಪಕ್ಷದಲ್ಲಿ ಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು. | **ಗುತ್ತಿಗೆ ಆಧಾರದ ಮೇಲೆ ನೇಮಕಾತಿಗಾಗಿ**: ಭಾರತದ ಕಾನೂನು ರೀತಿಯ ಸ್ಥಾಪಿತವಾದಂತ ಮಾನ್ಯತೆ ಪಡೆದ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿರತಕ್ಕದು<br><br>ಹಾಗೂ ನಾಗರಿಕ ಮತ್ತು ಸೇವಾ ವಿಷಯಗಳಲ್ಲಿ ಕನಿಷ್ಠ 5 ವರ್ಷಗಳ ವಕೀಲಿ ವೃತ್ತಿ ನಡೆಸಿರುವ ಸೇವಾ ಅನುಭವವನ್ನು ಹೊಂದಿರತಕ್ಕದ್ದು. |

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ರಾಜೇಂದರ್ ಕುಮಾರ್ ಕಟಾರಿಯಾ)**
ಸರ್ಕಾರದ ಪ್ರಧಾನ ಕಾರ್ಯದರ್ಶಿ
ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ

**PR-538**

ಮುದ್ರಕರು ಹಾಗೂ ಪ್ರಕಾಶಕರು:- ಸಂಕಲನಾಧಿಕಾರಿಗಳು, ಕರ್ನಾಟಕ ರಾಜ್ಯಪತ್ರ, ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು

S VISWANATH

Scanned with OKEN Scanner